**ದಿನಾಂಕ: 15.04.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್ ಎಂ ಹೆಚ್ ವಕೀಲರಿಂದಃ**

ನಾನು ಮತ್ತು ಆರೋಪಿ ಸಹೋದರರಾಗಿರುವ ಕಾರಣ ನಮ್ಮ ಮತ್ತು ಆರೋಪಿಯ ಮನೆ ಒಂದೇ ಓಣಿಯಲ್ಲಿ ಅಕ್ಕ ಪಕ್ಕದಲ್ಲಿವೆ ಎಂದರೆ ಸರಿಯಲ್ಲ. ಅರೋಪಿ ನಮ್ಮಸಂಬಂಧಿಕನಾದ ಕಾರಣ ಅವರ ಮನೆಗೆ ಹೋಗುವುದು ಮತ್ತು ಬರುವುದು ಮಾಡುತ್ತಿದ್ದೇನು ಎಂದರೆ ಸರಿಯಲ್ಲ. ನಮ್ಮ ತಂದೆ ಆರೋಪಿಯ ತಂದೆಗೆ ಜಮೀನನ್ನು ಮಾರಾಟ ಮಾಡಿದ ಕಾರಣ ನಮ್ಮ ಮತ್ತು ಅರೋಪಿಯ ನಡುವೆ ಮನಸಾ ಮನಸಾ ಸರಿ ಇಲ್ಲ ಎಂದರೆ ಸರಿಯಲ್ಲ. ಆ ಕಾರಣ ಆರೋಪಿಗೆ ಸೇರಿದ ಎರಡು ಚೆಕ್ ಗಳನ್ನು ಕಳ್ಳತನ ಮಾಡಿಕೊಂಡು ಬಂದು ಈ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣ ನಾನು ದೂರಿನಲ್ಲಿ ಸುಳ್ಳು ಅಂಶಗಳನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ರೂ.3 ಲಕ್ಷದ 75 ಸಾವಿರ ಹಣ ಕೊಟ್ಟೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಹಣ ಕೊಡದೇ ಇರುವುದರಿಂದ ಆರೋಪಿ ನನಗೆ ಹಣ ಕೊಡುವ ಪ್ರಸಂಗ ಬಂದಿರುವುದಿಲ್ಲ ಎಂದರೆ

ಸರಿಯಲ್ಲ. ಆ ಕಾರಣ ಆರೋಪಿ ನನಗೆ ಚೆಕ್ ಕೊಡುವ ಪ್ರಮೇಯ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿಧಾರರ ಸಹಿ ಮತ್ತು ಜೆ.ಎಂ.ಎಫ್.ಸಿ, ಹಾನಗಲ್